**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.**

**ಸಿ.ಸಿ. 481/2019**

| | | |
|---|---|---|
| ಸಾಕ್ಷಿಯ ಹೆಸರುಃ | ಪುಷ್ಪಗಿರಿ | ಫ್ರಾಸಾಃಃ 1 |
| ತಂದೆಯ ಹೆಸರುಃ | ಹುಚ್ಚಪ್ಪ | ಚಾಸಾಃಃ 1 |
| ವಯಸ್ಸುಃ | 59 ವರ್ಷ | ಪ್ರಮಾಣೀಕರಿಸಿದ ದಿಃ 07/11/2023 |
| ಉದ್ಯೋಗಃ | ಶಿಕ್ಷಕ | |
| ವಾಸಸ್ಥಳಃ | ದೊಡ್ಡಕಮರವಳ್ಳಿ ಗ್ರಾಮ, ಪಿರಿಯಾಪಟ್ಟಣ ತಾಲ್ಲೂಕು. | |

**ಮುಖ್ಯ ವಿಚಾರಣೆಃ** ಮಾನ್ಯ ಸಸಅ ರವರಿಂದಃ

ದಿಃ 20/03/2016 ರಂದು ಸುಮಾರು 11.30 ಗಂಟೆಗೆ ಮನುಗನಹಳ್ಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಚುನಾವಣಾ ಅಧಿಕಾರಿಯಾಗಿ ನೇಮಿಸಿದ್ದರು. ಬೆಳಿಗ್ಗೆ 9.00 ಗಂಟೆಯಿಂದ ಚುನಾವಣೆ ನಡೆಯುತ್ತಿತ್ತು. ಸುಮಾರು 11.30 ಗಂಟೆ ಸಮಯದಲ್ಲಿ ಮಂಜುನಾಥ, ಪುಟ್ಟಸ್ವಾಮಿಗೌಡ, ಮಧು, ದರ್ಶನ್, ರೂಪ, ಶೈಲಾ, ಶೃತಿ, ನಿಂಗರಾಜು ಇನ್ನೂ ಅನೇಕ ಜನರು ಏಕಾಏಕಿ ಮತ ಕೇಂದ್ರಕ್ಕೆ ನುಗ್ಗಿ ನನಗೆ ಮತ್ತು ಚಾಸಾ-2 ಮತ್ತು 3 ರವರಿಗೆ ತಳ್ಳಾಡಿದರು ಮತ್ತು ಸೂಳೇಮಗನೇ, ಬೋಳಿಮಗನೇ ಎಂದು ಬೈದರು. ಆಗ ನನಗೆ ಚುನಾವಣಾ ಕರ್ತವ್ಯಕ್ಕೆ ಅಡ್ಡಿಪಡಿಸಿದರು. ಅಲ್ಲಿದ್ದ ಮತ ಪೇಪರ್, ಶಾಹಿ, ಇಂಕ್ ಪ್ಯಾಡ್‌ಗಳು, ಪೆನ್ನುಗಳು, ದಾಖಲೆಗಳು ಮತ್ತು ಚುನಾವಣಾ ಮತದಾರ ಪಟ್ಟಿ ಇತ್ತು ಅವುಗಳನ್ನು ತೂರಾಡಿದರು. ಮತಪೆಟ್ಟಿಗೆಯನ್ನು ಹೊರಗೆ ಬಿಸಾಡಿದರು. ಚುನಾವಣೆ ಮಾಡಲು ಅಡ್ಡಿಯಾದ್ದರಿಂದ ಚುನಾವಣೆಯನ್ನು ಮಾಡಲಾಗಲಿಲ್ಲ. ಈ ವಿಚಾರವಾಗಿ ನಾನು ಪೊಲೀಸರಿಗೆ ದೂರನ್ನು ನೀಡಿರುತ್ತೇನೆ. ನಮ್ಮ

ಸಿಬ್ಬಂದಿಗಳು ಅದನ್ನು ಪೋಟೋ ಮತ್ತು ವಿಡಿಯೋವನ್ನು ಮಾಡಿದರು. ಸಾಕ್ಷಿಯು ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿ.ಪಿ.1** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.1(ಎ)** ಎಂದು ಗುರುತಿಸಲಾಯಿತು. ಅದೇ ದಿನ ಸುಮಾರು 2.00 ಗಂಟೆ ಸಮಯಕ್ಕೆ ಪೊಲೀಸರು ಸ್ಥಳಕ್ಕೆ ಬಂದು ನಾನು ತೋರಿಸಿದ ಸ್ಥಳದ ಮಹಜರ್ ಕ್ರಮ ಜರುಗಿಸಿದರು. ಸಾಕ್ಷಿಯು ಮಹಜರ್ ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿ.ಪಿ.2** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.2(ಎ)** ಎಂದು ಗುರುತಿಸಲಾಯಿತು.

(ಮುದ್ದೇಮಾಲುಗಳು ಇಲ್ಲದ ಕಾರಣ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಪಿರಿಯಾಪಟ್ಟಣ.